ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ

656(875) ಶ್ರೀ ಶಿವಕುಮಾರ್ ಡಿ ಕೆ:(ಕನಕಪುರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನಲ್ಲಿ ಕನಕಪುರದಿಂದ ಕೋಡಿಹಳ್ಳಿ ಹುಣಸನಹಳ್ಳಿ ಮಾರ್ಗವಾಗಿ ತಮಿಳುನಾಡು ಗಡಿಯವರೆಗಿನ ರಸ್ತೆಯನ್ನು ಅಗಲೀಕರಣ ಹಾಗೂ ರಸ್ತೆ ಅಭಿವೃದ್ಧಿಪಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು)

ಅ) ಸದರಿ ರಸ್ತೆಯು (ರಾಜ್ಯ ಹೆದ್ದಾರಿ–3) ತಮಿಳುನಾಡು ಗಡಿಯಿಂದ ಆಂಧ್ರ ಗಡಿಗೆ ಸೇರುವ ರಸ್ತೆ ಆಗಿರುತ್ತದೆ.

ಇದು ಕನಕಪುರ ತಾಲ್ಲೂಕಿನಲ್ಲಿ ತಮಿಳುನಾಡು ಗಡಿಯಿಂದ ರಾಮನಗರ ತಾಲ್ಲೂಕು ಗಡಿಯವರೆಗೆ ಸರಪಳಿ 0.00 ರಿಂದ 48.30 ಕಿಮೀ ವರೆಗೆ ಒಟ್ಟು 48.30 ಕಿಮೀ ಉದ್ದ ಇರುತ್ತದೆ. ಸದರಿ ರಸ್ತೆಯಲ್ಲಿನ ಫೆಬ್ರವರಿ 2010 ರ ವಾಹನ ಸಂಚಾರ ಗಣತಿಯಂತೆ 4531.71 ಪಿ.ಸಿ.ಯು ಇರುತ್ತದೆ. ಈ ರಸ್ತೆಯ ಸರಪಳಿ 0.00 ರಿಂದ 30.00 ಕಿಮೀ ವರೆಗೆ 3.75 ಮೀ ಅಗಲವಿರುತ್ತದೆ. ಸರಪಳಿ 30.00 ಕಿಮೀ ನಿಂದ 48.30 ವರೆಗೆ 5.50 ಮೀ ಅಗಲವಿರುತ್ತದೆ.

ಪ್ರಸ್ತುತ ಸದರಿ ರಸ್ತೆಯನ್ನು ಅಗಲೀಕರಣ ಹಾಗೂ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಈ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸುವ ಕಾಮಗಾರಿ ಯು 2010–11ನೇ ಸಾಲಿನಲ್ಲಿ ಯಾವುದೇ ಯೋಜನೆಯಡಿಯಲ್ಲಿ ಸೇರಿರುವುದಿಲ್ಲ. ಸದರಿ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲು ಪ್ರತಿ ಕಿಮೀ ಗೆ ರೂ. 1.00 ಕೋಟಿಯಂತೆ ಸುಮಾರು ರೂ. 48.30 ಕೋಟಿ ಮೊತ್ತದ ಅವಶ್ಯಕವಿರುತ್ತದೆ. 2009–10ನೇ ಸಾಲಿನಲ್ಲಿ ರೂ. 28.54 ಲಕ್ಷಗಳ ವೆಚ್ಚದಲ್ಲಿ ಸದರಿ ರಸ್ತೆಯ ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲಾಗಿದೆ. ಪ್ರಸಕ್ತ 2010–11ನೇ ಸಾಲಿನಲ್ಲಿ ಪ್ರಸ್ತುತ ರಾಜ್ಯ ಹೆದ್ದಾರಿ ನಿರ್ವಹಣೆಗಾಗಿ ರೂ. 18.960–00 ಪ್ರತಿ ಕಿಮೀಗೆ ಅನುದಾನವನ್ನು

ಬಿಡುಗಡೆಗೊಳಿಸಲಾಗಿದ್ದು, ಆದ್ಯತೆ ಮೇರೆಗೆ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಸೇತುವೆ ಕಾಮಗಾರಿ ಸ್ಥಗಿತಗೊಂಡಿರುವುದು

657(1151) ಶ್ರೀ ಸುರೇಶ್ ಬಾಬು ಸಿ ಬಿ:(ಚಿಕ್ಕನಾಯಕನಹಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಹಾಗಲವಾಡಿಗೆ ಹೊಗುವ ರಸ್ತೆಯಲ್ಲಿ ಅಜ್ಜಿಗುಡ್ಡೆ ಗ್ರಾಮದ ಸಮೀಪ ಸೇತುವೆ ನಿರ್ಮಾಣ ಕಾಮಗಾರಿ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಾಮಗಾರಿ ಸ್ಥಗಿತಗೊಳ್ಳಲು ಕಾರಣವೇನು; ಈ ಕಾಮಗಾರಿಯನ್ನು ಯಾವಾಗ ಪುನರಾಂಭಿಸಲಾಗುವುದು;

ಇ) ಈ ಕಾಮಗಾರಿಗೆ ಇದುವರೆವಿಗೆ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ಹಾಗೂ ಅಂದಾಜು ವೆಚ್ಚ ಎಷ್ಟು(ಪೂರ್ಣ ಮಾಹಿತಿ ನೀಡುವುದು)?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ 3054 (ಯೋಜನೆ) ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಅಡಿಯಲ್ಲಿ ಕೈಗೊಳ್ಳಲಾಗಿದ್ದು ಸುತ್ತೋಲೆ ದಿನಾಂಕ 31-08-2009ರಲ್ಲಿ ಸದರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಹಾಳಿ ಯಥಾಸ್ಥಿತಿಯಲ್ಲಿಯೇ ಮುಕ್ತಾಯಗೊಳಿಸಲು ಸೂಚಿಸಿದ ಮೇರೆಗೆ ದಿನಾಂಕ 31-08-2009ರ ಅಂತ್ಯಕ್ಕೆ ಅಬಟ್‌ಮೆಂಟ್ ಕ್ಯಾಪ್‌ವರೆಗೆ ನಿರ್ವಹಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಯಿತು.

ಸದರಿ ಸೇತುವೆಯ ಉಳಿದ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಸೇತುವೆಯ ಉಳಿದ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಸುವರ್ಣ ರಸ್ತೆ ಯೋಜನೆ ಕಾಯಕ್ರಮದಡಿ ಚಿಕ್ಕನಾಯಕನಹಳ್ಳಿ-ಹಾಗಲವಾಡಿ ರಸ್ತೆ ವಿವಿಧ ಸರಪಳಿಗಳ